ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

## ಬುಧವಾರ, ದಿನಾಂಕ: ೧೫ನೇ ಸೆಪ್ಟೆಂಬರ್, ೨೦೨೧

---

## ಸಮೂಹ – III

೧. ಲೋಕೋಪಯೋಗಿ ಸಚಿವರು

೨. ಕಂದಾಯ ಸಚಿವರು

೩. ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೪. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೫. ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು

೬. ಪಶುಸಂಗೋಪನೆ ಸಚಿವರು

---

## ರಾಜ್ಯದ ವಸತಿ ಮನೆಗಳಿಗೆ ಬಿಲ್ ಆಗದೇ ಇರುವ ಕುರಿತು

ಶ್ರೀ ಹೆಚ್. ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –

೩೧ (೪೩೨) ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿವಿಧ ವಸತಿ ಯೋಜನೆಯಡಿಯಲ್ಲಿ ಕಳೆದ ೨ ವರ್ಷಗಳಲ್ಲಿ ವಸತಿ ರಹಿತರಿಗೆ ಮನೆಗಳನ್ನು ಕಲ್ಪಿಸುವ ಕಾರ್ಯಕ್ರಮವು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಯೋಜನೆ ಪೂರ್ಣಗೊಳಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಆ) ವಿವಿಧ ವಸತಿ ಯೋಜನೆಯಡಿಯಲ್ಲಿ ಹಲವಾರು ಮನೆಗಳು ಸಂಪೂರ್ಣಗೊಂಡಿದ್ದು, ಜಿ.ಪಿ.ಎಸ್.ಸಹ ಆಗಿದ್ದು, ವಿಜಿಲಿಯನ್ ಆಪ್ ತಾಂತ್ರಿಕ ಸಮಸ್ಯೆಗಳಿಂದ ಒಂದು ಬಿಲ್ಲು ಸಹ ಫಲಾನುಭವಿಗಳಿಗೆ ಪಾವತಿ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ; ಆ ಪೈಕಿ ಖರ್ಚಾಗಿರುವ ಹಾಗೂ ಬಾಕಿ ಉಳಿದಿರುವ ಹಣ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಯೋಜನಾವಾರು ಅಂಕಿ ಅಂಶ ಸಹಿತ ಮಾಹಿತಿ ನೀಡುವುದು)

(ಈ) ತುಮಕೂರು ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಿಂದ ಕಳೆದ ೩ ವರ್ಷಗಳಿಂದ ಎಷ್ಟು ಮನೆಗಳು ಮಂಜೂರಾಗಿವೆ; ಎಷ್ಟು ಮನೆಗಳು ಪೂರ್ಣಗೊಂಡಿವೆ? (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಬಗ್ಗೆ

**ಶ್ರೀ ಎಸ್. ರವಿ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨ (೪೭೮) ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು; ಅವುಗಳಿಂದ ವರ್ಷಾವಾರು ಹೊರ ಬರುತ್ತಿರುವ ಪಶುವೈದ್ಯರ ಸಂಖ್ಯೆ ಎಷ್ಟು;

(ಆ) ಹೊಸ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳನ್ನು ತೆರೆಯುವ ಯೋಜನೆ ಸರ್ಕಾರದಡಿ ಇದೆಯೇ, ಇದ್ದಲ್ಲಿ, ಎಲ್ಲೆಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ;

(ಇ) ನೂತನ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳನ್ನು ತೆರೆಯಲು ಇರುವ ಸಮಸ್ಯೆಗಳೇನು;

(ಈ) ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿರುವ, ಕೇಂದ್ರಗಳ ಸಂಖ್ಯೆ ಎಷ್ಟು; ಅವುಗಳಿಗೆ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು; ತಡೆದಿರುವ ಹುದ್ದೆಗಳ ಸಂಖ್ಯೆ ಎಷ್ಟು?

## ಕಂದಾಯ ನಿವೇಶನಗಳನ್ನು ನೋಂದಾಯಿಸಲು ಅನುಮತಿ ನೀಡುವ ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩ (೪೫೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿವೇಶನ ಎಂದರೇನು; ಅವುಗಳಲ್ಲಿ ಎಷ್ಟು ವಿಧ, ಅವು ಯಾವುವು; ಕಂದಾಯ ನಿವೇಶನ ಎಂದರೇನು; ಕಾನೂನಿನಡಿ ಇದರ ಮಹತ್ವವೇನು; (ವಿವರವಾದ ಮಾಹಿತಿ ನೀಡುವುದು)

(ಆ) ಕಂದಾಯ ನಿವೇಶನ ನೋಂದಣಿಯನ್ನು ಸರ್ಕಾರ ಸ್ಥಗಿತಗೊಳಿಸಿರುವುದು ನಿಜವೇ; ಹಾಗಿದ್ದಲ್ಲಿ, ಸ್ಥಗಿತಗೊಳಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು)

(ಇ) ನೋಂದಣಿ ಸ್ಥಗಿತಗೊಳಿಸಿರುವುದರಿಂದ ಲಕ್ಷಾಂತರ ಮಧ್ಯಮ ವರ್ಗದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

(ಈ) ಕ್ರಮಬದ್ಧ ಆಸ್ತಿ, ಕ್ರಮಬದ್ಧವಲ್ಲದ ಆಸ್ತಿಗಳು ಎಂದರೇನು; ಇವುಗಳನ್ನು ಯಾವ ನಮೂನೆ ಫಾರಂನಲ್ಲಿ ನಮೂದಿಸಲಾಗಿರುತ್ತದೆ; ಕಾನೂನಿನಡಿ ಇದರ ಮಹತ್ವವೇನು; (ವಿವರವಾದ ಮಾಹಿತಿ ನೀಡುವುದು)

(ಉ) ಕಂದಾಯ ನಿವೇಶನ ನೋಂದಣಿಯನ್ನು ಸರ್ಕಾರ ಯಾವಾಗ ಪ್ರಾರಂಭಿಸಿ ಬಡ ಜನರಿಗೆ ಅನುಕೂಲ ಮಾಡಿಕೊಡುವುದು? (ವಿವರಿಸುವುದು)

## ಲೋಕೋಪಯೋಗಿ ಇಲಾಖಾ ಗುಣಮಟ್ಟ ಹಾಗೂ ಕಾಮಗಾರಿಗಳ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು ) –**

೩೪ (೩೮೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕೋಪಯೋಗಿ ಇಲಾಖಾ ಗುಣಮಟ್ಟ ಹಾಗೂ ಕಾಮಗಾರಿಗಳ ಗುಣಮಟ್ಟದ ಮಾಪನ ವ್ಯವಸ್ಥೆ ಬಗ್ಗೆ ಸರ್ಕಾರ ಯಾವ ರೀತಿಯ ವ್ಯವಸ್ಥೆ ರೂಢಿಸಿಕೊಂಡಿದೆ; (ವಿವರವಾದ ಮಾಹಿತಿ ಒದಗಿಸುವುದು)

(ಆ) ಈ ಕುರಿತು ಸರ್ಕಾರ ರೂಪಿಸಿರುವ ರೂಪು ರೇಷೆಗಳಾವುವು; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಚಿಂತನೆಗಳೇನು;

(ಇ) ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯ ಮಧ್ಯಂತರ ವರದಿ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಈ ಕುರಿತು ಸರ್ಕಾರದ ಅಭಿಪ್ರಾಯಗಳೇನು? (ವಿವರ ಒದಗಿಸುವುದು)

## ದೇವಸ್ಥಾನಗಳ ಜಾಗವನ್ನು ಪರಭಾರೆ ಮಾಡುತ್ತಿರುವ ಬಗ್ಗೆ

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೫ (೪೬) ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಸೇರಿದ ಭೂಮಿಯನ್ನು ಪರಭಾರೆ ಮಾಡಲು ಕಾರಣಗಳೇನು; ಇದರಿಂದ ಸಂಬಂಧಿತ ದೇವಸ್ಥಾನಗಳಿಗೆ ಯಾವ ರೀತಿಯಲ್ಲಿ ಉಪಯೋಗವಾಗಿದೆ; ದೇವಸ್ಥಾನದ ೯೮೨೫.೯೧ ಎಕರೆ ಜಾಗವನ್ನು ಯಾವ ವರ್ಷದಲ್ಲಿ ಪರಭಾರೆ ಮಾಡಲಾಯಿತು ಮತ್ತು ಯಾರಿಗೆ ಪರಭಾರೆ ಮಾಡಲಾಯಿತು; (ವಿವರ ನೀಡುವುದು)

(ಆ) ಪರಭಾರೆ ಮಾಡಲಾದ ೯೮೨೫.೯೧ ಎಕರೆ ಜಾಗವನ್ನು ಯಾರು ಯಾವ ದೇವಸ್ಥಾನಕ್ಕೆ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ, ಇದರಲ್ಲಿ ದೇವಸ್ಥಾನ ಖರೀದಿಸಿದ ಜಾಗವೆಷ್ಟು; ದೇವಸ್ಥಾನಕ್ಕೆ ದಾನ ಉಂಬಳಿ ಮೂಲಕ ದೊರೆತ ಜಾಗವೆಷ್ಟು; (ವಿವರ ನೀಡುವುದು)

(ಇ) ದೇವಸ್ಥಾನಕ್ಕೆ ದಾನ, ಉಂಬಳಿ ಮೂಲಕ ದೊರೆತ ಜಾಗವನ್ನು ಪರಭಾರೆ ಮಾಡುವ ಕುರಿತು ಇರುವ ನಿಯಮಗಳೇನು? (ಸದರಿ ನಿಯಮದ ಪ್ರತಿಯನ್ನು ಒದಗಿಸುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ನಿರ್ಮಿತಿ ಕೇಂದ್ರಗಳ ಸ್ಥಾಪನೆ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೬ (೪೦೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯ ವತಿಯಿಂದ ನಿರ್ಮಿತಿ ಕೇಂದ್ರ ಸ್ಥಾಪನೆಗೊಂಡಿದ್ದು ಯಾವಾಗ; (ಮಾಹಿತಿ ನೀಡುವುದು)

(ಆ) ಇದುವರೆಗೆ ನಿರ್ಮಿತಿ ಕೇಂದ್ರಗಳು ಸರ್ಕಾರಕ್ಕೆ ಎಷ್ಟು ಲಾಭದಾಯಕ ಮೊತ್ತವನ್ನು ಸಂಗ್ರಹಿಸಿದೆ; (ವಿವರ ನೀಡುವುದು)

(ಇ) ಸದರಿ ಜಿಲ್ಲೆಗಳಲ್ಲಿ ನಿರ್ಮಿತಿ ಕೇಂದ್ರವು ಪ್ರಾರಂಭಗೊಂಡ ದಿನದಿಂದ ಇಲ್ಲಿಯವರೆಗೆ ಯಾವ ಯಾವ ಯೋಜನೆಗಳು ಪೂರ್ಣಗೊಂಡಿದೆ; (ಮಾಹಿತಿ ನೀಡುವುದು)

(ಈ) ಅಪೂರ್ಣಗೊಂಡಿರುವ ಕಾಮಗಾರಿ ಬಗ್ಗೆ ಕಾರಣ ನೀಡುವುದು; ಪೂರ್ಣಗೊಂಡಿರುವ ಕಾಮಗಾರಿಗಳು ನಿರ್ಮಿತಿ ಕೇಂದ್ರದಿಂದ ಹಸ್ತಾಂತರಗೊಳಿಸಿದ ಕಾಮಗಾರಿ ಎಷ್ಟು; (ವಿವರ ನೀಡುವುದು)

(ಉ) ನಿರ್ಮಿತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು; ಎಷ್ಟು ಅಧಿಕಾರಿಗಳು ಯಾವ ಯಾವ ಹುದ್ದೆಯಲ್ಲಿ ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ; ಅವರ ವಿದ್ಯಾರ್ಹತೆ ನಿರ್ಬಂಧವೇನು? (ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಯ ಪಶು ವಿಶ್ವವಿದ್ಯಾನಿಲಯ ಸಿಬ್ಬಂದಿಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೭ (೩೮೬) ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಈ ವಿಶ್ವವಿದ್ಯಾನಿಲಯದಲ್ಲಿ ಅರ್ಧಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಖಾಲಿಯಿರುವ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡುವುದು ಯಾವಾಗ? (ಸಂಪೂರ್ಣ ವಿವರಗಳನ್ನು ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಕಾಮಗಾರಿಯ ಪ್ರಗತಿಯ ಕುರಿತು

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೮ (೩೫೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಬಿ.ಸಿ. ರೋಡ್–ಅಡ್ಡಹೊಳೆ ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್–೭೫) ಕಾಮಗಾರಿಯು ಕಳೆದ ೨ ವರ್ಷಗಳಿಂದ ಯಾವುದೇ ಪ್ರಗತಿ ಕಾಣದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸದರಿ ಕಾಮಗಾರಿಯ ಗುತ್ತಿಗೆದಾರರ ವಿವರ, ಕಾಮಗಾರಿಯ ಅನುದಾನದ ಒಟ್ಟು ವಿವರ ನೀಡುವುದು)

(ಇ) ಇದೂವರೆಗೆ ಬಿಡುಗಡೆಯಾದ ಅನುದಾನ ಎಷ್ಟು; (ಕಾಮಗಾರಿಯ ಪ್ರಗತಿ ಕುರಿತಂತೆ ಅಂಕಿ–ಅಂಶಗಳೊಂದಿಗೆ ಸಂಪೂರ್ಣ ವಿವರ ನೀಡುವುದು)

(ಈ) ಶಿರಾಡಿಘಾಟ್ ಪ್ರದೇಶದಲ್ಲಿ ಎಷ್ಟು ಕಡೆ ಭೂಕುಸಿತದಿಂದಾಗಿ ರಸ್ತೆಗೆ ಅಡಚಣೆ ಆಗಿರುತ್ತದೆ; ದುರಸ್ಥಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

# ಗ್ರಾಮ ಪಂಚಾಯಿತಿಗಳಲ್ಲಿ ಶವ ಸಂಸ್ಕಾರಕ್ಕೆ ಅಗತ್ಯ ಸ್ಮಶಾನಗಳ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೯ (೪೩೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಶವ ಸಂಸ್ಕಾರಗಳಿಗೆ ಅಗತ್ಯ ಸ್ಮಶಾನಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬಹಳಷ್ಟು ಭೂಮಿ ನೀರಾವರಿಗೊಳಪಟ್ಟು ಶವ ಸಂಸ್ಕಾರಕ್ಕೆ ಸ್ಥಳ/ಸ್ಮಶಾನಗಳಿಲ್ಲದಿರುವ ಗ್ರಾಮಗಳಿಗೆ ಅಗತ್ಯ ಸ್ಮಶಾನಗಳನ್ನು ನಿರ್ಮಿಸಲು ಮತ್ತು ಸ್ಥಳಗಳನ್ನು ಗುರುತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಶವ ಸಂಸ್ಕಾರಕ್ಕೆ ಸ್ಮಶಾನಗಳಿವೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಶವ ಸಂಸ್ಕಾರಕ್ಕೆ ಸ್ಮಶಾನಗಳಿಲ್ಲ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಶವ ಸಂಸ್ಕಾರಕ್ಕೆ ಸ್ಮಶಾನಗಳಿಲ್ಲದಿರುವ ಗ್ರಾಮಗಳಲ್ಲಿ ಸ್ಮಶಾನ ಭೂಮಿ ನಿರ್ಮಿಸುವ ಸಲುವಾಗಿ ಸರ್ಕಾರ ನಿಗಧಿಪಡಿಸಿದ ದರದಲ್ಲಿ ಜಮೀನು ಸಿಗದಿರುವ ಕಾರಣ, ಜಮೀನಿನ ದರವನ್ನು ಪರಿಷ್ಕರಿಸುವ ಮತ್ತು ಅಗತ್ಯ ಮಾರ್ಗಸೂಚಿ ರಚಿಸುವ ವಿಚಾರ ಸರ್ಕಾರದ ಮುಂದಿದೆಯೇ;

(ಊ) ಜಮೀನಿಗೆ ಪರಿಷ್ಕೃತ ದರ ನಿಗಧಿಪಡಿಸಿ ಜಮೀನು ಖರೀದಿಸಿ ಸ್ಮಶಾನಗಳನ್ನು ನಿರ್ಮಿಸುವ ಸಂಬಂಧ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ? (ವಿವರ ಒದಗಿಸುವುದು)

## ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಕುರಿತು

**ಶ್ರೀ ಪ್ರಕಾಶ್ .ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು ) –**

೪೦ (೪೧೯) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:

(ಅ) ಮಂಡ್ಯ ಜಿಲ್ಲೆಯ, ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಣಿಗಾರನಕಟ್ಟೆ–ಹೊಸದೊಡ್ಡಿ, ಬಸವನಗೌಡದೊಡ್ಡಿ, ದಾಲನಕಟ್ಟೆ ಎಂಬ ಲಂಬಾಣಿ ತಾಂಡಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಎಲ್ಲಾ ತಾಂಡಗಳು ಮುತ್ತತ್ತಿ, ಕಾಡಿನ ಅಂಚಿನ ಪ್ರದೇಶಗಳಾಗಿದ್ದು, ಈ ಪ್ರದೇಶದಲ್ಲಿ ಲಂಬಾಣಿ ಜನರು ವಾಸವಾಗಿರುವ ದಾಖಲೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಪ್ರದೇಶದಲ್ಲಿ ವಾಸಿಸುತ್ತಿರುವ ಲಂಬಾಣಿ ಜನಾಂಗದ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು (ವಿವರ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕುರಿತು

**ಶ್ರೀ ಎಸ್ .ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೪೧ (೪೧೬) ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಪಶುಸಂಗೋಪನಾ ಇಲಾಖೆ ಅಡಿಯಲ್ಲಿರುವ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಪಶು ಚಿಕಿತ್ಸಾಲಯಗಳಿಗೆ ಮಂಜೂರಾದ ವಿವಿಧ ಹಂತದ ಹುದ್ದೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಪಶು ಚಿಕಿತ್ಸಾಲಯಗಳಿಗೆ ಮಂಜೂರಾದ ವಿವಿಧ ಹಂತದ ಹುದ್ದೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ಗ್ರಾಮ ಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕ ಜೇಷ್ಠತಾ ಪಟ್ಟಿಯನ್ನು ಒಗ್ಗೂಡಿಸುವ ಬಗ್ಗೆ

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೨ (೪೧೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ದ್ವಿತೀಯ ದರ್ಜೆ ಸಹಾಯಕರುಗಳ ವೇತನವು ಒಂದೇ ಶ್ರೇಣಿಯದ್ದಾಗಿದ್ದು, ಪದೋನ್ನತಿ ನೀಡುವಾಗ ಮಾತ್ರ ಜೇಷ್ಠತಾ ಪಟ್ಟಿಯನ್ನು ಬೇರ್ಪಡಿಸಿ ಪದೋನ್ನತಿಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು; (ವಿವರಗಳನ್ನು ನೀಡುವುದು)

(ಆ) ಕಂದಾಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರ ಮತ್ತು ರಾಜಸ್ವ ನಿರೀಕ್ಷಕರ ಜೇಷ್ಟತಾ ಪಟ್ಟಿಯು ಒಂದೇ ಆಗಿದ್ದು, ಒಂದೇ ಜೇಷ್ಟತಾ ಪಟ್ಟಿಯಂತೆ ಉಪ ತಹಸೀಲ್ದಾರ್ ಹುದ್ದೆಗೆ ಪದೋನ್ನತಿ ನೀಡಲಾಗುತ್ತಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಅದೇ ರೀತ್ಯಾ ಗ್ರಾಮಲೆಕ್ಕಿಗರು ಹಾಗೂ ದ್ವಿತೀಯ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಯನ್ನು ಒಗ್ಗೂಡಿಸಲು ಇರುವ ಅಡೆತಡೆಗಳೇನು;

(ಇ) ಗ್ರಾಮಲೆಕ್ಕಿಗರ ಹಾಗೂ ದ್ವಿತೀಯ ದರ್ಜೆ ಸಹಾಯಕರ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ನಿಯಮವು ಸಚಿವರ ಸಂಪುಟದಲ್ಲಿ ಅನುಮೋದನೆಗೊಂಡು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಿದಂತೆ ಅಧಿಸೂಚನೆ ಸಂಖ್ಯೆ:ಕಂಇ:೨೦:ಬಿಎಸ್‌ಐ:೨೦೨೧, ದಿನಾಂಕ: ೨೯.೦೭.೨೦೨೧ರ ಕರಡು ಅಧಿಸೂಚನೆಯಂತೆ ಯಾವ ಕಾಲಮಿತಿಯಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗುವುದು? (ವಿವರಿಸುವುದು)

## ಕೆರೆಗಳ ಒತ್ತುವರಿ ಕುರಿತು

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩ (೪೧೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕಳೆದ ೨೫ ವರ್ಷಗಳ ಹಿಂದೆ ಎಷ್ಟು ಕೆರೆಗಳು ಇದ್ದವು; ಪ್ರಸ್ತುತ ಎಷ್ಟು ಕೆರೆಗಳಿವೆ;

(ಆ) ಕೆರೆಗಳ ಒತ್ತುವರಿ ಕುರಿತು ಮಾನ್ಯ ಉಚ್ಚನ್ಯಾಯಾಲಯ ನೀಡಿದ ಆದೇಶವೇನು; ಆದೇಶ ಪಾಲಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು;

(ಇ) ಈವರೆವಿಗೂ ಎಷ್ಟು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಬಾಕಿ ಇರುವ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವುದು ಯಾವಾಗ; ಈವರೆವಿಗೂ ತೆರವುಗೊಳಿಸದಿರಲು ಕಾರಣವೇನು; (ವಿವರ ನೀಡುವುದು)

(ಉ) ತೆರವುಗೊಳ್ಳುವ ಮುನ್ನ ಸದರಿ ಜಾಗದಲ್ಲಿರುವ ಮನೆ/ನಿವೇಶನ ಮಾಲೀಕರು ಖಾತೆ ಕಂದಾಯ ಪಾವತಿ ಮಾಡಿದ್ದಾರೆಯೇ; (ವಿವರ ನೀಡುವುದು)

(ಊ) ಪ್ರಸ್ತುತ ಒತ್ತುವರಿ ಮಾಡುವ/ಮಾಡಿರುವ ಪ್ರದೇಶಗಳಲ್ಲಿ ಈ ಹಿಂದೆ ಮನೆ ನಿರ್ಮಾಣ ಮಾಡಲು ಪರವಾನಗಿ ನೀಡಲಾಗಿದೆಯೇ; ಪರವಾನಗಿ ನೀಡಿರುವವರು ಯಾರು; (ವಿವರ ನೀಡುವುದು)

(ಋ) ಖಾತೆ ಕಂದಾಯ ಪಾವತಿ ಮಾಡಿ ಪರವಾನಗಿ ಪಡೆದು ಮನೆ ನಿರ್ಮಾಣ ಮಾಡಿರುವ ಮಾಲೀಕರಿಗೆ ಆಗುವ ನಷ್ಟವನ್ನು ಯಾರು ಭರಿಸುತ್ತಾರೆ; (ವಿವರ ನೀಡುವುದು)

(ೠ) ನೋಂದಣಿ ಮಾಡುವ ಸಮಯದಲ್ಲಿ ಸರ್ಕಾರದ ಬೊಕ್ಕಸಕ್ಕೆ ಹಣ ಪಾವತಿಸಿಕೊಂಡು ನಂತರ ಪ್ರತಿ ವರ್ಷ ಕಂದಾಯ ವಸೂಲಿ ಮಾಡಿರುವ ಈ ಪ್ರಕರಣದಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು?

## ತಾಳಗುಪ್ಪ–ಹೊನ್ನಾವರ ರೈಲ್ವೆ ಮಾರ್ಗ ಜೋಡಣೆ ಪ್ರಸ್ತಾವನೆ ಕುರಿತು

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೪ (೪೬೩) ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತಾಳಗುಪ್ಪ–ಹೊನ್ನಾವರ ರೈಲ್ವೆ ಮಾರ್ಗ ಜೋಡಣೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ೫೦%–೫೦% ಅನುದಾನದಡಿ ನಿರ್ಮಿಸುವ ಪ್ರಸ್ತಾವನೆ ಇದೆಯೇ; (ಮಾಹಿತಿ ಒದಗಿಸುವುದು)

(ಆ) ಸದರಿ ಪ್ರಸ್ತಾವನೆಯು ಕಾರ್ಯಗತಗೊಂಡಲ್ಲಿ ಕರಾವಳಿ ಭಾಗಕ್ಕೆ ಶೀಘ್ರ ಸಂಚಾರ ಸಾರಿಗೆ ಮತ್ತು ವಾಣಿಜ್ಯ ಅಭಿವೃದ್ಧಿ ದೃಷ್ಟಿಯಿಂದ ಅತ್ಯಂತ ಸೂಕ್ತವಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗೂ ಯಾವ ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಲು ಸಂಬಂಧಪಟ್ಟ ಇಲಾಖೆಗಳ ಅನುಮತಿ ಪಡೆಯುವ ಕಾರ್ಯ ಪ್ರವೃತ್ತಿ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಸದರಿ ಯೋಜನೆಗೆ ರಾಜ್ಯ ಸರ್ಕಾರ ಎಷ್ಟು ಹಣ ಮೀಸಲಿಟ್ಟಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬೀದರ ಜಿಲ್ಲೆಯ ಇನಾಮ್ ಜಮೀನನ್ನು ಕೃಷಿಯೇತರ (NA) ಜಮೀನಾಗಿ ಮಾಡಿರುವ ಬಗ್ಗೆ

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೫ (೪೪೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ನೀಡಲಾದ ಇನಾಮ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ಮಾಡಿ ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಇಲ್ಲದಿದ್ದರೂ ಸದರಿ ಇನಾಮ ಜಮೀನನ್ನು

ಕೃಷಿಯೇತರ ಜಮೀನನ್ನಾಗಿ ಮಾಡಿ ನಿವೇಶನಗಳು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಜಮೀನುಗಳ ಸಂಖ್ಯೆವಾರು ಮಾಹಿತಿ ಒದಗಿಸುವುದು)

(ಆ) ಬೀದರ್ ನಗರದ ಕುಂಬಾರವಾಡ ಸರ್ವೆ ಸಂಖ್ಯೆ:೩೫ ಇನಾಮ ಜಮೀನಾಗಿದ್ದು, ಈ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಿ ನಿವೇಶನ ಮಾರಾಟ ಮಾಡುತ್ತಿರುವುದು ಹಿಂದಿನ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತರಲಾಗಿದ್ದು, ತನಿಖೆ ನಡೆಸುವುದಾಗಿ ಸದನದಲ್ಲಿ ಆಶ್ವಾಸನೆ ನೀಡಿದ್ದು, ಇಲ್ಲಿಯವರೆಗೆ ತನಿಖೆ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು? (ಮಾಹಿತಿ ನೀಡುವುದು)

(ಇ) ಬೀದರ ನಗರದ ೧೫ ಕಿ.ಮೀ ಸುತ್ತಲು ಇರುವ ಪರಿಶಿಷ್ಟ ಜಾತಿಗೆ ನೀಡಲಾದ ಇನಾಮ ಜಮೀನುಗಳೆಷ್ಟು? (ಇನಾಮದಾರರ ಹೆಸರು ಸಹಿತ ಸರ್ವೆ ಸಂಖ್ಯೆ ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾಸೂ–322 400ಪ್ರತಿಗಳು (ಪಿ5)

**List of Questions for Oral Answers**

**Total No. of Questions - 15**

# LIST - 03

# KARNATAKA LEGISLATIVE COUNCIL

## ONE HUNDRED AND FORTY FOURTH SESSION

## Wednesday, the 15th September, 2021

---

**GROUP - III**

1. Minister for Public Works
2. Minister for Revenue
3. Minister for Housing and Infrastructure Development
4. Minister for Fisheries, Ports and Inland Water Transport
5. Minister for Muzrai, Haj and Wakf
6. Minister for Animal Husbandry

---

### NON PAYMENT OF BILL FOR HOUSES UNDER HOUSING SCHEMES IN THE STATE

**Sri H.M. Ramesha Gowda (Elected by Legislative Assembly) -**

31(432) Will the Minister for Housing and Infrastructure Development be pleased to state:-

a. whether it has come to the notice of the Government that the programme of providing houses to the houseless persons under various housing scheme is being carried out in slow pace during the last 2 years; if so, the steps taken to complete this scheme; (Complete details be furnished)

b. whether it has come to the notice of the Government that several houses are completed under various housing schemes alongwith G.P.S and not a single bill has been paid to the beneficiaries due to technical issue with

Vigilian app; if so, the steps taken by the Government in this regard; (districtwise, talukwise information be furnished)

c. the particulars of grant released to various housing schemes for the last 3 years; out of them, the amount spent and unspent; (districtwise, talukwise, schemewise information along with statistics be furnished)

d. the number of houses sanctioned by various housing schemes to Tumkur district for the last 3 years; the number of houses completed? ( talukwise complete information be furnished)

**VETERINARY SCIENCES UNIVERSITIES IN THE STATE**

**Sri S. Ravi (Local Authorities Constituency) -**

32 (478) Will the Minister for Animal Husbandry be pleased to state:-

a. the number of veterinary Sciences universities in the State; the number of veterinary doctors passed out from such universities annually;

b. Whether the Government has contemplated to establish new veterinary Science universities; if so, the places where intended to establish;

c. the problems for establishing of new veterinary universities ;

d. the number of centres in Bengaluru rural and Ramanagara district; the number of posts sanctioned therefor; the number of posts withheld?

**PERMISSION FOR REGISTRATION OF REVENUE SITES**

**Sri Kantharaj (BML) (Local Authorities Constituency) -**

33 (458) Will the Minister for Revenue be pleased to state:-

a. the interpretation of 'sites' in the context of Revenue department; out of which, the types and the particulars thereof; the definition of revenue site; its significance under the law? (detailed information be furnished)

b. whether it is true that the registration of revenue site has been stopped; if so, the reasons for the same; (detailed information be furnished)

c. whether it has come to the notice of the Government that lakhs of middle class people are facing hardship due to the stoppage of registration; if so, the steps taken by the Government in this regard;

d. the interpretation of 'legal property' and 'illegal property'; the particulars of formats in which these are mentioned; its significance under the law; (detailed information be furnished)

e. the date on which the Government would commence the registration of revenue sites to benefit the poor people? (information be furnished)

**QUALITY AND WORKS OF PUBLIC WORKS DEPARTMENT**

**Smt. Bharathi Shetty (Nominated) -**

34 (385) Will the Minister for Public Works be pleased to state:-

a. the particulars of methods adopted by the Government about quality assessment of Public Works department and its works; (the detailed information be furnished)

b. the particulars of outlines chalked out by the Government in this regard; if not, the plans of the Government in this regard;

c. the measures taken by the Government regarding the interim report of quality control task force; the opinion of the Government in this regard? (details be furnished)

## ALIENATION OF TEMPLE LANDS

**Sri N. Ravi Kumar (Elected by Legislative Assembly) -**

35 (46) Will the Minister for Muzrai, Haj and Wakf be pleased to state:-

a. the reasons for alienating the land which belong to the temples of Muzrai department of the State; the manner in which it has been benefitted to the concerned temples; the year in which 9825.91 acre of land of the temple has been alienated and to whom it has been alienated; (details be furnished)

b. the name of the person who has alienated 9825.91 acres of land to which temple and for what purpose and out of which, the extent of land purchased by the temple; the extent of land that has been availed through gifts; (details be furnished)

c. the rules prevailing to alienate the land of the temple which has been availed through gifts? (copy of the said rule be furnished)

## ESTABLISHMENT OF NIRMITHI KENDRAS IN KALABURAGI AND YADGIR DISTRICTS

**Sri Sunil Vallyapur (Elected by Legislative Assembly) -**

36 (404) Will the Minister for Revenue be pleased to state:-

a. the date on which Nirmithi Kendras were established by revenue department in Kalaburagi and Yadgir districts; (information be furnished)

b. the profit amount that has been collected by the Nirmithi Kendras to the Government till date; (details be furnished)

c. the particulars of schemes that have been completed since the date of establishment of Nirmithi Kendra in the said districts to till date; (information be furnished)

d. the reasons for incomplete work be furnished; the number of completed works; and the works that have been handed over by the Nirmithi kendras; (details be furnished)

e. the number of officers who are working in the Nirmithi kendras; the years from which the officers have been working in various posts; and their educational qualifications? (information be furnished)

## STAFF IN VETERINARY UNIVERSITY OF BIDAR DISTRICT

**Sri Vijay Singh (Local Authorities Constituency) -**

37 (386) Will the Minister for Animal Husbandry be pleased to state:-

a) the number of staff who are working in Veterinary University of Bidar District; whether it has come to the notice of the Government that more than fifty percent of posts are lying vacant in the said university;

b) the date on which the vacant posts would be filled up by the Government? (complete information be furnished)

## PROGRESS OF ROAD WORKS IN DAKSHINA KANNADA DISTRICT

**Sri K. Harish Kumar (Elected by Legislative Assembly) -**

38 (353) Will the Minister for Public Works be pleased to state:-

a. whether it has come to the notice of the Government that the work of B.C.Road-Addahole National Highways (N.H-75) which comes the limits of Dakshina Kannada district has been stopped without any progress for the last 2 years;

b. if so, the measures taken by the Government to complete the said works rapidly; (the details of the contactors of the said work and the details of the grant for the work be furnished)

c. the grant that has been released till date; (complete details of the progress of work with statistics be furnished)

d. the places where the traffic was distrupted due to landslide in Shiradi ghat; the steps taken by the Government for the repair of the same?

## REQUIREMENT OF BURIAL GROUNDS FOR FUNERAL IN GRAM PANCHAYATS

**Sri Kavatagimath Mahantesh Mallikarjun (Local Authorities Constituency) -**

39 (435) Will the Minister for Revenue be pleased to state:-

a. whether it has come to the notice of the Government that there is a scarcity of burial grounds for cremation in the limits of Gram Panchayats of the State;

b. if so, the measures taken by the Government to construct required burial grounds and identify the places in the villages which do not have burial grounds for cremation due to most of the land has been irrigated;

c. the number of villages in Belagavi district which have burial grounds for cremation; (talukwise details be furnished)

d. the number of villages in Belagavi district which do not have burial grounds for cremation; (talukwise details be furnsished)

e. since the land is not avialable at the price fixed by the Government for the construction of burial grounds in the villages which do not have burial grounds for cremation, whether the Government has contemplated to revise the price for the land and to chalkout the necessary guidelines;

f. the particulars of measures taken by the Government with regard to the construction of the burial grounds by purchasing land after fixing the revised price for the land? (details be furnished)

## CONVERSION OF LAMBANI THANDAS AS REVENUE VILLAGES

**Sri Prakash K. Rathod (Nominated) -**

40 (409) Will the Minister for Revenue be pleased to state:-

a. whether it has come to the notice of the Government that the Lambani Thandas namely Manigaranakatte, Hosadoddi, Basavanagouda doddi, Dalanakatte are in the limits of Byadarahalli gram panchayat, Halagur hobli in Malavalli taluk of Mandya district;

b. if so, whether it has come to the notice of the Government that all these Thandas are locating at the edge of Muttatti forest area and the records of Lambani people residing in this area;.

c. the measures that would be taken by the Government to convert the Thandas of Lambani community who are living in this area as revenue villages? (details be furnished)

## STAFF WORKING IN ANIMAL HUSBANDRY DEPARTMENT

**Sri S.V. Sankanur (Graduates' Constituency) -**

41 (416) Will the Minister for Animal Husbandry be pleased to state:-

a. the number of posts in various cadres sanctioned to veterinary hospitals in village, taluk and district level under the department of Animal Husbandry of the State; (districtwise information be furnished)

b. the number of staff who are working at present in the posts of various cadres which are sanctioned to veterinary hospitals in village, taluk and district levels of the State and the number of posts lying vacant? (districtwise information be furnished)

## CONSOLIDATION OF SENIORITY LIST OF VILLAGE ACCOUNTANT AND SECOND DIVISION ASSISTANTS

**Sri Naseer Ahmed (Elected by Legislative Assembly) -**

42 (418) Will the Minister for Revenue be pleased to state:-

a. whether it has come to the notice of the Government that the pay of Village Accountant and Second Division Assistants is the same scale but the promotion is being given by bifurcating the seniority list; if so, the action taken by the Government ; (details be furnished)

b. whether the Government has noticed that the seniority list of First Division Assistant and Revenue Inspector of Revenue department is same and that promotion is given to the post of deputy tahsildar as per the consolidated single seniority list; the impediments to consolidate the seniority list of Village Accountants and Second Division Assistants in similar manner;

c. the time limit within which final notification would be issued as per draft notification KamE:BSI:2021, dated 29.07.2021 as published in Karnataka State Gazette after cabinet approval about the amendment of Village Accountant and Second Division Assistant Cadre and Recruitment Rules? (details be furnished)

## ENCROACHMENT OF LAKES

**Sri N. Appajigowda (Local Authorities Constituency) -**

43 (415) Will the Minister for Revenue be pleased to state:-

a. the number of lakes which were existed before 25 years in the limits of Bengaluru city, Bengaluru Rural and BBMP; the number of lakes at present;

b. the order that has been passed by the Hon'ble High Court regarding the encroachment of lakes; the steps taken by the Government to comply with the order;

c. the number of encroached lakes which have been evicted so far; (complete details be furnished)

d. the time by when the remaining lakes which are encroached would be evicted; the reasons for not evicting the same till date; (details be furnished)

e. whether the owners of house/site who were residing in the said place have paid the Khatha revenue before being evicted; (details be furnished)

f. whether the licence has been issued earlier to construct the house in the encroaching/encroached area at present; the name of the persons who issued the licence; (details be furnished)

g. the name of the persons who would bear the loss caused to the owner who constructed the house after obtaining the licence by paying Khata revenue; ( details be furnished)

h. the name of the person who would be made accountable in this case who has collected amount for the exchequer of the Government and also collected revenue every year during the registration?

**PROPOSAL FOR CONNECTING TALAGUPPA-HONNAVARA RAILWAY LANE**

**Sri B.K. Hariprasad (Elected by Legislative Assembly) -**

44 (463) Will the Minister for Housing and Infrastructure Development be pleased to state:-

a. whether the proposal for connecting Talaguppa-Honnavara railway lane is before the Government; whether there is any proposal to construct the same under 50%-50% grant by the State and Central Government; (information be furnished)

b. whether the Government has considered the said proposal seriously once the proposal is implemented, it would be most suitable in view of quick transportation and commercial development of the coastal region and the timelimit within which the permission of the

concerned departments would be obtained to complete the project; (complete information be furnished)

c. the grant earmarked by the State Government for the said project? (complete information be furnished)

## CONVERSION OF INAM LAND AS NON AGRICULTURE LAND IN BIDAR DISTRICT

**Sri Aravind Kumar Arali (Local Authorities Constituency) -**

45 (443) Will the Minister for Revenue be pleased to state:-

a. whether it has come to the notice of the Government that sites are being sold by converting Inam land as non agriculture land which is provided to Scheduled caste/ Scheduled Tribe even though there is no provision in rules to sell the Inam land by converting as non agriculture land; if so, the steps taken by the Government; (information of serialwise lands be furnished)

b. the sites are being sold by converting the Sy No.35 of Kumbarwada, an Inam Land in Bidar city as non agriculture land has brought to the notice of the Government in the last session and the reasons for not conducting investigation after the assurance given in the house; (information be furnished);

c. the extent of lands that have been provided to the Scheduled caste which are located in 15 kms radius of Bidar district? (the details of the owner of the Inam lands along with Sy.No be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 322 - Copies